ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಶ್ರೀಕಾಂತ ರುದ್ರಪ್ಪ ಅಂಬರಗಟ್ಟಿ:- ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕು ಹಳೆಯಲುನಾಡು ಗ್ರಾಮದ ಒಳಚರಂಡಿ ವ್ಯವಸ್ಥೆಯನ್ನು ಕೂಡಲೆ ಮಾಡಬೇಕೆಂದು ಆ ಗ್ರಾಮದ ಗ್ರಾಮಸ್ಥರ ಪರವಾಗಿ ಶ್ರೀ ಸಿ.ರಂಗಯ್ಯ ಅವರು ನೀಡಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಸವಣೂರು ತಾಲ್ಲೂಕು ಕುರುಬರ ಮಲ್ಲೂರ್ ಗ್ರಾಮದ ಹತ್ತಿರವಿರುವ ಬಾಜಿರಾಯನಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಬೇಕೆಂದು ಕೋರಿ ಆ ಗ್ರಾಮದ ಗ್ರಾಮಸ್ಥರು ಸಲ್ಲಿಸಿರುವ ಅರ್ಜಿಯನ್ನು ಈ ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

ಸಮಿತಿಯ ಕಾಲಾವಧಿ ವಿಸ್ತರಣೆ

ಶ್ರೀ ಶರಣ ಬಸಪ್ಪ ದರ್ಶನಾಪುರ:- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ದರವನ್ನು ಪುನರ್ ವಿಮರ್ಶಿಸುವ ಬಗ್ಗೆ ಪರಿಶೀಲಿಸಿ ದಿನಾಂಕ 20.7.96ರ ಒಳಗಾಗಿ ವರದಿಯನ್ನು ಸಲ್ಲಿಸಲು ರಚಿಸಲಾದ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು ದಿನಾಂಕ 27.7.96ರವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪ ಮಂಡಿಸಲಾಯಿತು.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ ಜಂಟಿ ಸದನ ಸಮಿತಿಯು ವರದಿ ಸಲ್ಲಿಸಬೇಕೆಂಬ ಕಾಲಾವಧಿಯನ್ನು ಮುಂದುವರಿಸುವುದು ಎಕ್ಸಟೆನ್‌ಷನ್ ಕೇಳಿದ್ದಾರೆ ಒಂದು ವಾರ, ಸೆಷನ್ಸ್ ಇದೆ. ಪವರ್ ಹೈಕ್ ಮೇಲೆ ಜಾಯಿಂಟ್ ಕಮಿಟಿ ಮಾಡಿದ್ದೇವಲ್ಲ, 20ಕ್ಕೆ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪರ್ಮನೆಂಟ್‌ಲಿ ಕೇಳಿದರೂ ಕೊಟ್ಟು ಬಿಡಬಹುದು ಏಕೆಂದರೆ ಸ್ಟೇ ಅಂತೂ ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ:- ಬೆಲೆ ಏರಿಸುವುದಿಲ್ಲ ಎಂದರೆ ಒಂದು ವರ್ಷ ಬೇಕಾದರೂ ಮುಂದೆ ಹಾಕಿ ಸಾರ್.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೊಡಬಹುದು ಎಂದು ಎರಡೂ ಕೈ ಎತ್ತುತ್ತಿದ್ದಾರೆ ನಿಮ್ಮ ಪರವಾಗಿ ಹೇಳಿದರೂ ನಿಮಗೆ ಸಂತೋಷ ಇಲ್ಲ ಎಂದರೆ ಹೇಗೆ?